# brown book

## THE BOOK WAS DRENCHED

TEXT LITE WITHIN THE BOOK ONLY

UNIVERSAL LIBRARY
OU_200566
UNIVERSAL LIBRARY

॥ ಶ್ರೀಃ ॥

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ,

ಉಡುಪಿ.

# ಉಗಾಭೋಗಗಳು.

೩ನೇ ಭಾಗ

ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ,

ಮುದ್ರಿಸಲ್ಪಟ್ಟಿತು.

1923.

ಬೆಲೆ 0—2—0

ALL RIGHTS RESERVED.

K81-5
M37 Uga
P12

|| ಶ್ರೀಃ ||

|| ಶ್ರೀಗೋಪಾಲಕೃಷ್ಣಾಯ ನಮಃ ||

# ಉಗಾಭೋಗಗಳು.

## ಭಾಗ ೨.

### ೧೫೬.

**ರಾಗ ಆನಂದಭೈರವಿ, ಅಟತಾಳ.**

ಕ್ಷೇಮವೆ ಕೊಡು ಜೀಯಾ । ಇವರಿಬ್ಬರಿಗೆ ನಿತ್ಯ । ಕಾಮಿತಾರ್ಥವೆ ಎನಗೆ ಯಿದೆಯಲ್ಲವೆ । ಭೂಮಿಯೊಳಗೆ ಮತ್ತೊಂದಪೇಕ್ಷೆಯಿಲ್ಲವೊ ಸ್ವಾಮಿ ಕರುಣದಿಂದ ಒಲಿದು ನೋಡೊ । ಶ್ರೀಮನೋಹರ ನಮ್ಮ ವಿಜಯವಿಠಲ ನಿನ್ನ । ನಾಮದ ಬಲಕ್ಕಿಂತ ಅನ್ಯಬಲಗಳುಂಟೇ ॥ ೧ ॥

### ೧೫೭.

ಎಲೊ ಎಲೊ ದುರಿತವೆ ಓಡು ಓಡು । ನಿಲ್ಲಲಾಗದು । ಎನ್ನ ಬಳಿಯಲ್ಲಿ ಮೊದಲಂತೆ ತಲೆಬಲಿತು ಸೊಕ್ಕಿ ನಿಂದಿಯಾದರೆ ನಿನ್ನ । ಕಾಲಕ್ಕೆ ಕ್ಷೇಮವಿಲ್ಲ । ಕೈಲಿಕಡ್ಡಿಯನಿತ್ತೆ । ಮಲ್ಲವರ ಗಂಡಾ । ಶ್ರೀಕೃಷ್ಣ ಕಂಡರೆ ತಲೆಯ ಚಂಡಾಡುವ ಭೂತಬಲಿಯ ನೀವಾ । ತಿಳಿದುಕೊ ನಿನ್ನೊಳು ಮೊದಲಂತೆ ನಾನಲ್ಲ । ಸುಲಭ ವಿಜಯವಿಠಲ ವೊಲಿದರೆ ಭಯವಿಲ್ಲ ॥ ೧ ॥

### ೧೫೮.

ಕುಲಿಶವ ನಂಬಿದ ನರಗೆ ಶೈಲದ ಭಯ ಉಂಟೆ । ಜಲದಿ ನೆಲೆಬಲ್ಲವಗೆ ಕೊಳಚಿನೀರಿನ ಚಿಂತೆ ಚಲದಂಕಾ ವಿಜಯವಿಠಲನ ಚರಣವಿರಲು । ಕಾವರಾರೆಂದು ಯಿನ್ಯಾಕೆ ಮರುಗುವಿ ಪ್ರಾಣಾ ॥ ೧ ॥

## ೧೫೯.

ಜಾಲಿಸ ಬೇಕೊ । ಜಾಲಸಾಗರನಾಗಿ । ಜಾಲಪಾಶಂಗಳ ಕಸಪೋಗುವಂತೆ । ಜಾಲಿಸ ಬೇಕೊ । ಜಾಲಿಸಿ ವಳಗೆ ವಸ್ತ ಸಂಪಾದಿಸಿ ಜಾಳಿಗೆ ಚನ್ನಾಗಿ ತುಂಬಲು ಮಾಯಾಜಾಲ ವಿಜಯವಿಠಲನ ಸನ್ನಿಧಿಯಲ್ಲಿ ಜಾಳಿಗೆಯಿಂದ ಜನನಾ ನೀಗಬೇಕೊ ॥ ೧ ॥

## ೧೬೦.

ನಾನು ನೀಯೆಂದು ಒಮ್ಮೆಗಾದರು ನರ ಅನಂತಜನುಮದಲ್ಲಿ ನುಡಿದನಾಗೆ । ಶ್ವಾನ ಸೂಕರದುರ್ಯೋನಿಯಲ್ಲಿ ಪುಟ್ಟಿ ಮಾನಸಾಧಮನಾಗಿ । ಕಷ್ಟಕಡೆಗೆ ನಾನಾ ಸಂಕಟಪಟ್ಟು । ಹೀನ ಭೋಜನ ಮಾಡಿ ತಾನಿಳಿವ ನಿತ್ಯನರಕದಲ್ಲೀ ॥ ಅನಂತಜನುಮದೊಳು ಸೇವಕನೆಂದೆನೆ ತಾನೊಲಿದು ಯೀವ ವಿಜಯವಿಠಲ ಗತಿ ॥ ೧ ॥

## ೧೬೧.

ಯಿಕೊ ಯೀಭವದೊಳು ಶಿಕ್ಕಿದೆ ಕರುಣಾಳೊ ದಿಕ್ಕು ಗಾಣದಾದೆ ಧರಣಿಯೊಳಗೆ ತಕ್ಕ ಸಪ್ರತಿಬಂಧಕ ಕಡೆಗಾಣದಲೆ ಮೊರೆ । ಅಕಟಕಟ ಪೊಕ್ಕೆ ನಿನ್ನ ಚರಣಪೊಕ್ಕರುಪಗಳಿಲ್ಲ । ಯಿದೆ ಮಾತು ದೊಂಯದಿರೆ ಭಕತವತ್ಸಲನೆಂಬೊ ಬಿರಿದು ಯೆಂತೊ । ಲಕುಮಿವಲ್ಲಭ ವಿಜಯವಿಠಲ ನಿನ್ನ ಪಕ್ಕೆಯಲ್ಲಿ ಪಾರಸಂಗ ಸತತಾ ಕೊಡು ॥

## ೧೬೨.

ವಂದೆಂಟುಬಾಗಿಲುವುಳ್ಳ ಪಟ್ಟಣದೊಳಗೆ । ಮುಂದೆ ಇಪ್ಪತ್ತನಾಲ್ಕು ಮನೆಯೊಳು । ತಂದೆನ್ನ ನಿಲ್ಲಿಸಿ ಒಳಗಿಟ್ಟು ಕಾವಲು ಮಾಡಿ । ಬಂಧನದೊಳು ಪೊಗಿಸಿ ಬಳಲಿಸುವದನ್ಯಾಯು ಆತ್ಮ ಅಂತರಾತ್ಮಕ ನೀನು ವಳಗಿದ್ದು ಬರಿದೆ ಸ್ವತಂತ್ರನೆಂದೆನ್ನ ಕೊಲ್ಲಿಸುವರೇನೋ ॥ ಕಂತುಪಿತರಂಗ ನೀ ಕಾಯಬೇಕೆನ್ನಾ । ನಾ ಯೆಂತಾದರೇನು ಅನಂತಮೂರುತಿ ವಿಜಯವಿಠಲಾ ॥ ೧ ॥

೧೬೩.

ಹೃದಯದ ಮಲವನ್ನು ತೊಳಿಯಲರಿಯದೆ ತಾವು। ಉದಯದೊಳಿದ್ದು ಮಿಂದು ಗಡಗಡಗುಟ್ಟುವಂತೆ ಅದರಿಂದಲೇನುಫಲ। ಅದಕಿಂತ ಉದಯಾಸ್ತಮಾನದೊಳಗಿಪ್ಪ । ಮುದಿ ಕಪ್ಪೆ ಮಾಡಿದ ತಪ್ಪೇನೈಯ್ಯ ಅದರಿಂದಲೇನುಫಲ। ಪುರಂಗರ ವಿಠಲನ ನಾಮವ ನೆನೆಯದೆ ದಿನಕ್ಕೆ ನೂರುಭಾರಿ ಮುಳುಗಿದರೇನಯ್ಯ ॥ ೧ ॥

೧೬೪.

ದರಿದ್ರರೆನ್ನ ಬಹುದೆ ಹರಿದಾಸರ । ಶಿರಿವಂತನೆನ ಬಹುದೆ ಹರಿದ್ರೋಹಿಗಳ। ಹರಿದಾಸರ ಮೇಲಿದ್ದ ಕರುಣವು ಶಿರಿದೇವಿ ಮೇಲಿಲ್ಲವೊ ಪುರಂದರವಿಠಲನ ಆಳುಗಳಿಗೆ ಯಲ್ಲಿಹುದೈ ಮಾನಾಭಿಮಾನ ಜಗದಿ ॥

೧೬೫.

ಕ್ಷೀರಸಾಗರಕೆ ಶ್ರೀಹರಿ ಬಂದಂತೆ। ಪ್ರಹಲ್ಲಾದನ ಮನೆಗೆ ನರಸಿಂಹ ಬಂದಂತೆ। ವಿದುರನ ಮನೆಗೆ ಶ್ರೀಕೃಷ್ಣಬಂದಂತೆ । ಗೋಪಿಯ ಮನೆಗೆ ಗೋವಿಂದ ಬಂದಂತೆ। ಲಕ್ಷ್ಮೀಪತಿವಿಠಲನ ದಿವ್ಯನಾಮವು ಯನ್ನ ನಾಲಿಗ್ಗೆ ಬಂದು ನಿಲ್ಲಲಿ ॥ ೧ ॥

೧೬೬.

ನೀರೊಳಗೆ ನಿಂತು ನಡುಗಿ ನಾರುವಂಗೆ ಗಂಬೂರಿ ಕಸ್ತೂರಿ ಲೇಪನದ ಮದವೆ॥ ಭಾರ ಬೆನ್ನಲಿ ಪೊಳಲು ಕಲ್ಲ ಕೈಮುಸಡಿದಂಗೆ ಧೀರಶೇಷನ ಶಯನದ ಮದವೋ॥ ಮೋರೆಯಲ್ಲಿ ಯಲ್ಲಾ ಕೆದರಿ ಬೇರು ಮೆಲುವನಿಗೆ ಸಾರಷಡ್ರಸನ್ನ ಭೋಜನದ ಮದವೋ॥ ಕರುಳವನಮಾಲೆ ಹಾಕಿದವಂಗೆ ಹಾರಪದಕಹಾಕಿದ ಮದವೋ॥ ಮೂರಡಿಯ ಭೂದಾನ ಬೇಡಿದವನಿಗೆ ಸಾರಿದವರಿಗಭೀಷ್ಟಗಳ ಪೂರೈಪ ಮದವೋ ॥ ಧರಣಿ ವಿಪ್ರರಿಗಿತ್ತು ಕುಳಿಪುದಕೆ ಸ್ಥಳವಿಲ್ಲದವಗೆ ಭುವನ ಕೀಳುವ ಮದವೊ॥ ಊರ ಬಿಟ್ಟು ವನ ಚರಿಸುವಂಗೆ ಮೂರುಧಾಮದ ಮನೆಯ ಭೋಗದ

ಮದಪ್ಪೋ ॥ ಪುರನಾರಿಯ ಬಯಸಿಕೊಂಬುವಂಗೆ ವಾರಿಜಭವ ಸುರರ ವಂದ್ಯಾನೆ ಮದಪ್ಪೋ ॥ ಊರೆಲ್ಲ ನೋಡೆ ಬತ್ತಲೆ ನಿಂತವ ಚಾರುವಸನ ವನುಟ್ಟು ಹೊಂದುವ ಮದಪ್ಪೋ ॥ ಘೋರತುರುಗವನೇರಿ ಹಾರಿಸ್ಯಾಡುವಂಗೆ ವೀರಸಿಂಹಾಸನದಲ್ಲಿ ಕುಳಿತ ಮದಪ್ಪೋ ॥ ಮೂರುದಿನ ಅರಸುತನ ಸ್ಥಿರವೆಂದು ನೆಚ್ಚಿ ಸಾರಿದವನ್ನ ಮರೆವದುಚಿತವೆ ಬಾರದೆ ತಪ್ಪನು ಹಿಂದಿನ ಭವಣೆ ನಿನಗೆ ದೂರವಿಚಾರಿಸಿ ನೋಡೊ ಕರುಣಾಸಿಂಧು ಶ್ರೀರಂಗ ರಾಜಗೋಪಾಲವಿಠಲ ನಿನ್ನ ಸಾರಿದವರ ಪೊರೆದು ಕೀರ್ತಿಪಡಿಯೋ । ೧ ॥

೧೬೭.

ಎಲ್ಲಾ ಒಂದೆ ಯೆಂಬುವರಾ ಎರಡು ದಾಡಿ ಕೀಳಿ । ಹಲ್ಲುದುರ ಕುಟ್ಟಲುಬೇಕು ಹರಿಭಕ್ತರಾದವರು । ಸಲ್ಲದು ಸಲ್ಲದು ಈವಾತು ಸಂಶಯಬೇಡಿರೋ । ಕಲ್ಲುನಾರಿಯ ಮಾಡಿದ ಶ್ರೀಪುರಂದರವಿಠಲಾ ॥

೧೬೮.

ಈಕಲ್ಪಸಾಧನ ಅಪರೋಕ್ಷಾನಂತರದಲ್ಲಿ ಬ್ರಹ್ಮಮೊದಲು ಮಾಡಿ ತೃಣಜೀವಪರ್ಯಂತರಾ । ಅವರವರ ಯೋಗ್ಯತಸಾಧನ ಹೇಳಿಯದೆ । ಇದು ಎಷ್ಟು ಆಯಿತೆಂದರೆ ಯರಡು ಮಹಾಪದ್ಮ ॥ ಐವತ್ತು ಪದ್ಮ । ಯರಡು ಮಹಾಖರ್ವ ಯೇಳು ಖರ್ವ ವಂದು ಅರ್ಬುದಾ । ಯೆಂಟು ಅರ್ಬುದ ಐವತ್ತಾರುಕೋಟಿ ವರುಷವಾಯಿತು ಶ್ರೀವಿಜಯವಿಠಲಾ ॥ ೧ ॥

೧೬೯.

ಅಣು ಆರಂಭಿಸಿಕೊಂಡು । ಅಜತೃಣಾದಿ ಕಲ್ಪತನಕ ಯೆಣಿಸಿ ಗುಣಿಸು ಮನ ವುತ್ಸಾಹದಿಂದ ಆಇನ ಕೋಟಿತೇಜ ವರದ ವ್ಯಾಸವಿಠಲ ಬ್ರಹ್ಮಾಂಡದೊಳಗೆ ಪೊಳವ ತ್ರಿವಿಧ ದೂರಮಾಡೀ ॥ ೧ ॥

೧೭೦.

ಘೋರಿಸುವ ದಾರಿದ್ರ್ಯ ದೂರಮಾಡಿದ್ಯೋ ನಿನ್ನ ಚಾರುಚರಣಾರವಿಂದವನೆ ಕೂಡಿ ಹಾರೈಸಿದ ಬಯಕೆ ಪೂರೈಸಿದಿಯೊ ನಿನ್ನ ಕಾರುಣ್ಯ

ಕೇನೆಂಬೆ ಕಮಲಾಲಯೆ । ಸಾರಿದೆನೊ ವರದ ಗೋಪಾಲವಿಠಲ ಕಾರುಣ್ಯಪಾತ್ರನ್ನ ಮಾಡಿದಿಯೊ ಯಿಂದೂ ॥ ೧ ॥

೧೭೧.

ಪುರಂದರದಾಸರು ವೈಶ್ಯವಾದವ್ಯನಾ । ವರ ಕುಮಾರಕ ಬದುಕಿಸಿದರು ಗಡಾ । ಗುರು ವ್ಯಾಸಮುನಿರಾಯರು ಭೂಪತಿಗೆ ಬಂದದು । ಸ್ತರವಾದ ಕುಯೋಗ ಬಿಡಿಸಿದರು ಗಡಾ । ಶಿರಿ ನಾರಾಯಣ ಯೋಗಿ ವ್ಯಾಸಮುನಿಗೆ ಬಂದ । ಉರಗಬಾಧಯು ಕಳದು ಪಾಲಿಸಿದರು ಗಡಾ । ಹರಿಯೆ ಈ ಕಲಿಯುಗದೊಳಗೆ ನಿನ್ನ ಶರಣರು ಯಿಂಥ । ಚರಿತೆ ಮಾಡಿಪ್ಪರು ಆವನಾಗರು ಯಿನಿತು । ಸ್ಮರಣೆ ಗೈದವನಿಗೆ ಮನಸು ನಿರ್ಮಲ ಕಾಣೊ । ಧರೆಯೊಳಗೆ ಈ ಮನುಜ ನುಡಿದಪ್ಪ ವೇದೋಕ್ತಾ । ನೆರೆ ನಂಬಿದವರಿಗೆ ಮೊಗಹಿಂಗಳದು । ಪರಿಶುದ್ಧನ ಮಾಡಿ ಪೊರೆವನು ತಡೆಯದೆ । ಹರಿಶರಣಂಗೆ ಯಿದಿರುಂಟೆ ಕರುಣಾಕರ ನಮ್ಮ ವಿಜಯವಿಠಲ ನಿನ್ನ । ಚರಣ ಭಜಿಸುವರ ಪಿಡಿದೊತ್ತು ಸಾನ್ನಿಧ್ಯ ॥ ೧ ॥

೧೭೨.

ಪ್ರಮೋದ ಸಂವತ್ಸರದಲ್ಲಿ ಯನ್ನವರಿಗೆ ರೋಮಕೊಂಕಾಗದು ಕಾಣೊ । ನೀನೊಲಿದರೆ ಪ್ರಮೋದವಲ್ಲದೆ ಕ್ಲೇಶಲೇಶವಿಲ್ಲ ಸ್ವಾಮಿ ಲಾಲಿಸಿ ಕೇಳೊ ॥ ಇಷ್ಟದೈವ ಪ್ರಮಾದದಿಂದಲಿ ಬಂದಿಪ್ಪ ಕಾಲಕ್ಕೆ ಗೋಮಾಯುವಂತೆ ವೋಡಿ ಪೋಪದು ಶ್ರೀಮನೋಹರ ನಮ್ಮ ವಿಜಯವಿಠಲ ನಿನ್ನ ನಾಮ ನೆನಸಿದ ಮಾರ್ಕಂಡೇಯ ಮುನಿಯ ನೋಡೋ ॥ ೧ ॥

೧೭೩.

ಕಾಲನಾಮಕ ಭಗವಂತ ನಿನ್ನಯ ಭೀತಿ ಕಾಲನಾಮಕಳಾದ ದುರ್ಗಾದೇವಿಗೆ । ಕಾಲಾಖ್ಯ ಗರುಡಶೇಷರುದ್ರರಿಗೆ ದುರ್ಗೆ ಭಯ ಕಾಲಯಮಗಿವರ ಭಯ । ಯಮನ ಭೀತಿ ಕಾಲನೆಂಬೊ ಯಮನ ತಮ್ಮನಿಗೆ ಆಗುವದೂ । ಕಾಲಮೃತ್ಯುವಿಗೆ ಯಿಾಕಾಲ ಭಯ ಕಾಲನಾ

ತರಿಗೆ ಭಯ ಇವರಿಂದಾಗುವದೂ ॥ ಕ್ಷುದ್ರ ಕಾಲದೇವತೆಗಳಿಗೆ ಯಾತರ ಭಯ ಕಾಲ ಕಾಲಕ್ಕೆ ನೀನಿರಲು ಸ್ವತಂತ್ರದಲ್ಲಿ ಲೇಶಕಾಲವಾದರು ನರನ ಮುಟ್ಟುವರೆ । ಕಾಲನಿಯಾಮಕ ನಿನ್ನ ನಂಬಲು ಸರ್ವಕಾಲದಲ್ಲಿ ಸುಖವುಂಟು ನಿರೋಗದಿ ಕಾಲದೇಶಿಕ ಪೂರ್ಣ ವಿಜಯವಿಠಲ ನಿನ್ನ ಕಾಲಿಗೆರಗುವೆನು ಕರಪಿಡಿದು ಸಲಹೋ ॥ ೩ ॥

೧೭೪.

ರುದ್ರಾಂತರ್ಗತನರಸಿಂಹ ರೋಗನಿವಾರಣ । ಭದ್ರವಾಗಲಿ ಇವಗೆ ಇವನ ಪತ್ನಿ ಆರ್ತವಳಾಗಿ ಚಲ್ವರಿದು ವಂದಿಸಳು ಸ । ಮುದ್ರೇಶ ಇವಳ ಮಂಗಳಸೂತ್ರ। ನಿದ್ರೆಯೊಳಗಾದರು ಸ್ಥಿರವಾಗಿ ಇರಲಿ ಉ। ಪದ್ರಗಳು ಬಂದರೂ ಪರಿಹರಿಸು । ಅದ್ರಿಯನು ಉದ್ಧರಿಸಿ ಗೋಕುಲ ಕಾಯ್ದೆ ಕರುಣಾಸ । ಮುದ್ರ ಆಪತ್ಕಾಲಬಾಂಧವನೆ । ಕ್ಷುದ್ರದೇವತೆಗಳಿಗೆ ಶಕ್ತಿ ಈಪರಿಯುಂಟೆ। ಛಿದ್ರಸಾಸಿರವಿರೆ ಕ್ಷಮಿಸಬೇಕೋ ॥ ಮುದ್ರಧರಪಾಲ ವಿಜಯವಿಠಲರೇಯನೆ ದಾ। ರಿದ್ರಭಂಜನ ಎನಗೆ ಇದೆವರಾಕುತ್ತರಕೊಡೂ ॥ ೧ ॥

೧೭೫.

ಮಂಗಳಪ್ರದ ನೀನು ನಿನ್ನ ಭಜಿಸಿದ ಜನರ । ಸಂಗವಲಿಪ್ಪ ಮಾನವಗೆ ಸತತ । ಮಂಗಳವಲ್ಲದೆ ಲೇಶಕ್ಲೇಶಪಾಪಗಳಿಲ್ಲ । ತುಂಗಮಂಗಳ ತರಂಗವಾರ್ಧಿಚಂದ್ರ । ಪಿಂಗಳನು ರಂಗವನು ಓರಿದಾಗಿ । ಬ್ರಾಹ್ಮಣಗೆ ಅಂಗಆರೋಗ್ಯವಾಗಲಿ। ಅಂಗನೆಸಂಗಜನಕ ನಮ್ಮ ವಿಜಯವಿಠಲ ನಿನ್ನ ಅಂಘ್ರಿಧ್ಯಾನವೆ ಸರ್ವಾರಿಷ್ಟನಾಶಾ ॥ ೧ ॥

೧೭೬.

ಒಬ್ಬ ಸತಿ ಪತಿಗಾಗಿ ಮುನಿಯ ಶಾಪವ ಧರಿಸಿ । ಅಬ್ಜಬಾಂಧವನ ನಿಲಿಸಿದಳು ನೋಡಾ । ಒಬ್ಬ ಸತಿ ಪತಿಗಾಗಿ ಧರ್ಮನ ಸಭೆಯ ಸಾರಿ ನಿಬ್ಬರದಿ ಪ್ರಾಣವನು ಪಡೆದಳು ನೋಡಾ । ಒಬ್ಬ ಸತಿ ಪತಿಗಾಗಿ ಚಿತ್ರಗುಪ್ತರು ಆಡಿದ ಶಬ್ದ ಲಾಲಿಸಿ ಐದೆತನ ಪಡೆದಳು ಊರ್ವಿಯೊಳಗೀಪರಿ ಸತಿಯರ ಸ್ವಧರ್ಮ ನಿಬಿಡವಾಗಿದೆ ನಿನ್ನ ದಯದಿ । ಅಬ್ಜನಾಭನೆ । ಇವ

ನ ಮೇಲೆ ದಯಮಾಡು ಕರುಣಾಬ್ಧಿಯೆ ಉಪೇಕ್ಷೆಮಾಡದಲೆ। ಅಬ್ಬರ ದೈವವೆ ಸಿರಿವಿಜಯವಿಠಲರೇಯ ಲಭ್ಯವಾಗಲಿ ಬೇಡಿದ ಅಭಯವು॥೧॥

೧೭೭.

ಮಂಗುಬ್ಬಿ ಬಾಯಿ ಬಿಟ್ಟಂತೆ ಬಿಡುತಲಿ ಸಿಂದು ಶರಗೊಡ್ಡಿ ಬೇಡಿ ಕೊಳ್ಳುತ್ತಿಹಳು ಜೀಯಾ। ಪರಮಪುರುಷನೆ ನೀನು ಎನ್ನೊಳು ವ್ಯಕ್ತವಾಗಿ ಇರುತಿರಲು ತಿಳಿದು। ಬಲುದೈನ್ಯಳಾಗಿ । ಶರಣ ಪೇಳಿದ ಮಾತು ನಿನ್ನವೆ ಎಂದಿಗೂ ಸರಿಯೆಂದು ಜ್ಞಾನಿಗಳು ಪೇಳುತಿಪ್ಪರೂ। ಶಿರಿದಾಗಗೊಡದಿರು ಯುವರಿಗೆ ಬ್ರಾಹ್ಮಣಗೆ ಬಂದ ಮಹಾದುರಿತ ತರಿದೊಟ್ಟಿ । ರೋಗಗಳು ಕಳಿಯೊ ಮರಣವಿರಹಿತ ನಮ್ಮ ವಿಜಯವಿಠಲ ನಿನ್ನ ಸರಿ ಘೋರಿಯು ಕಾಣೆನೊ ರಕ್ಷಿಸುವಲ್ಲಿ॥ ೭ ॥

೧೭೮.

ನಿನ್ನ ಮನಸೊಳಗೆ ಉಳಿವೆನೆಂಬೊ ಹರುಷ ಮಹಾಘನ್ನವಾಗಿ ರಲೀಕೆ ಯನ್ನೊಳಗೆ ಇಸಿತು ಪ್ರೇರಿಸಿ ನೀನೆ ನುಡಿಸಿಪ್ಪು ಯೆಂದಿಗು ಚಂದವಲ್ಲದೆ ಯಿದಕೆ ಸಂಶಯವಿಲ್ಲ ಯನ್ನು ಯೋಚಿಸಲೇಕೆ ಭಕ್ತರ ಪಾಲಿಪ ಬಿರಿದು ಅನಂತಕಾಲಕ್ಕೆ ನಿನ್ನದಯ್ಯ। ಉನ್ನಂತಮಹಿಮ ಶಿರಿ ವಿಜಯವಿಠಲರೇಯ ಎನ್ನ ಮಾನಾಪಮಾನ ಮತ್ತಾರದಲ್ಲಾ ॥ ೧ ॥

೧೭೯.

ಅಬಲೆಯ ಮೇಲೆ ಮನಸು ಕರಗಿ ನಿನ್ನ ಅಬುಜಪಾದಕ್ಕೆ ಬಿಡದೆ ಒಸ್ಸೈಸಿಡೆ। ಪ್ರಬಲಸೀನಾದಕಾರಣದಿಂದ ಚನ್ನವಿಬುಧೇಶನ ರೋಗವಿನಾಶನನೆ ಶುಭವೆ ಕೊಡು ಜೀಯಾ॥ ನಿನಗಲ್ಲದೆ ಅನ್ಯವಿಭುಗಳಿಗೆ ಶರಣೆನ್ನೆ ಸರ್ವಕಾಲಶಿದಾವಮಾತುರವಲ್ಲ। ಅಂತರಂಗದ ಸ್ತೋತ್ರ। ಶಬರಿಗೆ ವಲಿದವನೆ ಸತ್ಯಮೂರುತಿ ಕುಬುಜೆಯ ತಿದ್ದಿದ ವಿಜಯವಿಠಲರೇಯ ನಿಬಿಡ ಕರುಣಾಂಬುಧಿ ಮಹಾದುರಿತಾರೀ॥ ೧ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೧೮೦.

ಒಂದೆರಡು ಮೂರು ನಾಲ್ಕೈದು ಆರಾರು। ಒಂದೆಂಟು ಒಂಭತ್ತು ಹತ್ತು ಸಾರಿ। ವಂದಿಸಿ ಸ್ತೋತ್ರ ಮಾಡಿದದಕೆ ಅವರವರ। ಬಂಧನ ಪರಿಹರಿಸಿ ಕಾಯ್ದೆ ನೀನು। ಒಂದೊಂದು ಭಕ್ತಿಗೆ ಅನುಭವವಾದದ್ದು ನೋಡಿ। ಇಂದು ಪ್ರಾರ್ಥಿಸಿದೆನು ಪಾರ್ಥಸೂತ। ಅಂದ ಮಾತನು ಬರಿದೆ ಆಗದಂತೆ ದೇವಾ। ಬಂದ ವ್ಯಾಧಿಗಳೆಲ್ಲ ಕಡೆಗೆ ಮಾಡಿ। ನಂದವನೆ ಇತ್ತು ಈದೇಹದಲ್ಲಿ ಸುಖಬಡಿಸು। ತಂದೆ ಈ ಭಕತನ ಮೊರೆಯ ಕೇಳೀ। ಕಂದರ್ಪಪಿತ ನಮ್ಮ ವಿಜಯವಿಠಲ ನಿನ್ನ। ಪೊಂದಿದ ಮೇಲೆ ಮುನ್ನಿನ ಕ್ಲೇಶಗಳಿಲ್ಲಾ ॥ ೧ ॥

೧೮೧.

ಮಾತು ಮುಂಚಿತು ಕಾಣೋ ಹೆಂಗಳೆಯ ಮನೋವೃತ್ತಿಗೆ। ಆತುಮದೊಳಗಿಟ್ಟ ಆತ್ಮ ಕೇಳೋ। ಭೂತಳದೊಳಗೆ ಭಕ್ತರಾಧೀನನೆಂದು। ಖ್ಯಾತವಾಗಿದೆ ನೋಡು ಸರ್ವರಲ್ಲೀ। ನೀತಗುಣವಂತ ನಿನ್ನವರ ದಾಸಾನುದಾಸ। ಜ್ಞಾತ ಅಜ್ಞಾತದಲ್ಲಿ ನುಡಿದೆನ್ನಯ್ಯಾ। ನೀ ತವಕದಿಂದಲಿ ನುಡಿ ಪಾಲಿಸದಿರಲು। ದಾತರೊಬ್ಬರ ಕಾಣೆ ಜೊಮ್ಮಾಂಡದಿ। ಯಾತರವನಾನಲ್ಲ ನಿನ್ನ ನಾಮವೆ ಗತಿ ಜೆ। ನ್ನಾತು ಕಾಯೋ ಎನ್ನ ಮನದೈವವೆ ॥ ವಾತಾಂತರ್ಗತ ನಮ್ಮ ವಿಜಯುವಿಠಲರೇಯ। ಪ್ರೀತನಾಗು ಎನ್ನ ಸ್ತುತಿಗೆ ವ್ಯೆಮೋರೂ ॥ ೧ ॥

೧೮೨.

ದೇವ ನಿನ್ನ ಪಾದದಾಣೆ ನಿನ್ನ ಭಕ್ತರಾಣೆ। ಈ ವಚನ ಸತ್ಯ ಮಾಡುವದು ಎನಗೆ ಇವನ। ಜೀವದಾನವ ಕೊಡು ಈ ದೇಹವೆ ಇರಲಿ ಮೂರುರೂಪ। ಎನಗಿದ್ದ ಆಯುಷ್ಯದೊಳಗಿತ್ತೆ। ಕಾವದಲ್ಲದೆ ಇನ್ನು ಸುಮ್ಮನಿಪ್ಪದು ಸಲ್ಲಾ ॥ ಸಾವಿರ ಬ್ರಾಹ್ಮಣಭೋಜನಮಾಡಿಸುವೆನು। ದೇವ ನಿನ್ನ ಪಾದದಾಣೆ ನಿನ್ನ ಭಕ್ತರಾಣೆ। ಈ ವೇಳೆಗೆ ಬಂದ ವ್ಯಾತ್ಯ ಓಡಿಸಬೇಕು। ಭೂವಿಬುಧರೆಲ್ಲರು ಕಷ್ಟಪಡುವದು ನೋಡು ಕೋವಿ

ದರಾಯ ಎನ್ನಾಣೆ ಕೇಳಿದಗತ್ಯ ಪಾವನಮೂರುತಿ ವಿಜಯವಿಠಲರೇಯ ಜೀವೇಶನಿಂದಲಿ ರಕ್ಷಣೆ ಮಾಡಿಸೊ ॥ ೧ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

## ೧೮೩.

ಅನಂತಕಲ್ಪಕ್ಕೆ ನಿನ್ನ ಮರೆ ಬಿದ್ದವಗೆ ಬಿನ್ನಪವಿಲ್ಲೆಂಬುದು ಕೇಳಿ ಬಲ್ಲೆ । ಚಿನ್ನ ದೈವರಾಯ ಪ್ರಹಲ್ಲಾದ ಮೊದಲಾದ ಭಕುತರ ಘನ್ನತಿಗೆ ಏನೆಂಬೆ ಲೋಕದಲ್ಲಿ । ಮನ್ನಿಸು ಮಹಾರಾಯ ವಿಜಯವಿಠಲರೇಯ ಬಿನ್ನಹ ಕೈಕೊಂಡು ಭಕುತನ್ನ ಪಾಲಿಸೊ ॥ ೧ ॥

## ೧೮೪.

ಜನಕನನೊಲ್ಲೆನವ್ವಾ । ತುಲಕಿ ಆಡುವನಾ । ಷಣ್ಮುಖನನೊಲ್ಲೆನವ್ವಾ । ಬಹುಬಾಯಿಯವನಾ । ಇಂದ್ರನೊಲ್ಲೆನವ್ವಾ ಮೈಯೆಲ್ಲಾ ಕಣ್ಣಿನವ್ವಾ । ಚಂದ್ರನೊಲ್ಲೆನವ್ವಾ । ಕಳೆಗುಂದುವನಾ । ರವಿಯನೊಲ್ಲೆನವ್ವಾ । ಉರಿದುಮೂಡುವನಾ । ಹರನನೊಲ್ಲೆನವ್ವಾ । ಮಂಡೆಯಾಗೊಂಬುವನಾ । ಚನ್ನರಾಯ ಚಲುವ ಜಗಕೆಲ್ಲ ಒಡೆಯನ ಕರದು । ತಾನೆ ಎನಗೆ । ಪುರಂದರವಿಠಲಾ ॥ ೧ ॥

## ೧೮೫.

ತನ್ನ ಅಂತರ್ಯಾಮಿ ಒಳಗಿಪ್ಪ । ಬಿಂಬನ । ಅನಂತಾನಂತ ಅಂಶವ ಚಿಂತಿಸಿ । ಜನ್ನಿಟ್ಟವರ ತಿಳಿದು । ಅವರವರ ಒಳಗಿಪ್ಪ । ಘನ್ನ ಮೂರುತಿಯ ತುತಿಸಿ ಬಲುಬಗೆಯಿಂದ ಪುಣ್ಯಾಪ್ರಾಣನೆಂದು ಸ್ಮರಿಸಿ ಅಂಶಗಳ । ಭಿನ್ನಮಾಡದೆ ತಿಳದು । ಬಿಂಬದೊಳಗೆ ಚನ್ನಾಗಿ ಕೂಡಿಸಿ ಏಕತ್ರಯವೆ ಮಾಡಿ ಮುನ್ನೆ ದ್ವಿವಿಧಕರ್ಮ ತೀರಿಸಲಾಗಿ ಪುಣ್ಯಾವೆ ಬರುವದು ಅದರಿಂದಲಾಪರು ತನ್ನ ಸಹಿತವಲ್ಲಿ ಗುಣ ಯೋಚಿಸ ಬೇಕು । ಪನ್ನಗಶ

ಯನ ನಮ್ಮ ವಿಜಯವಿಠಲರೇಯನ ಸನ್ನುಮತಿಯಿಂದ ಆಲೋಚಿಸಿದ ಮನುಜಗೆ ॥ ೧ ॥

೧೮೬.

ಎತ್ತಾಣೆತ್ತಾಣದೊ ಈ ಮಾಯಸಂಸಾರ । ನಿತ್ಯವಲ್ಲ ನಿತ್ಯವಲ್ಲ ವಿಚಾರಿಸೆ । ತುತ್ತನು ಮೆಲುವಾಗ ಕಂಟಕವಿದ್ದಂತೆ । ಮೃತ್ಯು ಮಾರಿಗಳು ಕಾದಿಪ್ಪವೆಲ್ಲ ॥ ಮರ್ತ್ಯದಲಿ ಪುಟ್ಟಿ ಸುಖಬಯಸುವ ನರಗೆ । ಹತ್ತು ಸಾವಿರ ಪ್ರಣವ ಮಾಡುವೆನೋ । ಉತ್ತುಮ ಬಯಸು ನಾಯ ತಲೆ ಮೇಲಿನ । ಬುತ್ತಿಯಂದದಿ ಕಾಣೊ ಸತಿಸುತರು । ಚಿತ್ತದಲ್ಯಾಡುವ ವಿಜಯವಿಠಲರೇಯನ । ತುತಿಸಾಲು ಬಂದು ಕೈವಲ್ಯವನೀವಾ ॥ ೧ ॥

೧೮೭.

ಕಾಲಕಾಲಕ್ಕೆ ನಿನ್ನ ನಾಮಸ್ಮರಣೆ ಎನ್ನ । ನಾಲಿಗೆಲಿ ಕೊಡು ಕಂಠ್ಯ ನಾರಾಯಣ । ಬಾಳಿ ಭವದೊಳಗೆ ಬಿದ್ದು ಬಯಲಾಸೆಯಲ್ಲಿ । ಕಾಲವನು ಕಳದೆ ಕಮಲೇಶ ರಂಗ । ಲಾಲಿಸೈಯ್ಯ ಮಾತು ಕರುಣದಿಂದಲಿ ನಿನ್ನ । ಆಳುಗಳ ಕೂಡ ವಾಲಗವನಿತ್ತು । ಕೀಳು ಮತಿಯನು ಬಿಡಿಸಿ ಕೀರ್ತನವ ಮಾಡಿಸು । ಕಾಲಿಗೆರಗುವೆನು ದುರಿತಹಾರಿ । ಪಾಲಸಾಗರಶಾಯಿ ವಿಜಯವಿಠಲ ನಿನ್ನ । ಪಾಲಿಗೆ ಬಂದವನೋ ಪತಿತಪಾವನನೇ ॥ ೧ ॥

೧೮೮.

ಹರಿಗೋವಿಂದನೆಂದ್ಹೇಳು । ಹತ್ತಾವತಾರ ಪೇಳು । ಗೆರೆಕರದೋರ್ಧ್ವ ನೋಡುತ । ತುಳಸಿಗೋವುಗಳಿಗೆರಗಿ । ನೈರುತ್ಯಕ್ಕೆ ಪೋಗಿ । ತೃಣವನಿಟ್ಟು ಗುರು ಪವಮಾನದೊರಿಯ ಅಚಲಾನಂದ ವಿಠಲಹರಿಯ ॥

೧೮೯.

ಎರಡು ಘಳಿಗೆ ಬೆಳಗು ಇರಲು ಗೃಹಸ್ಥಗೆ ಸ್ನಾನ । ಕರವ ಮುಗಿದು ಮಾಡೊ ಸಂಕಲ್ಪ ವೇದ । ಪರಮಪುಣ್ಯಾತ್ಮ ಬ್ರಾಹ್ಮಣಧರ್ಮವೆಂದು ಪುರಂದರವಿಠಲ ಮೆಚ್ಚಿ ಪಾಲಿಸುವಾ ॥ ಮಲಮೂತ್ರಮಾಡುವಾಗ ಕರ

ದಲ್ಲಿ ಜಲವಿರೆ। ಮಲಕೆ ಸಮಾನ ಅಂದು ಶುದ್ಧವಲ್ಲ। ವಿಲಸಿತ ಕರ್ಮವಾಚ
ರಿಸಿ ಹರಿಯ ನೆನೆಯು । ಒಲಿವ ಪುರಂದರವಿಠಲ ನಿತ್ಯಾ ॥ ೧ ॥

## ೧೯೦.

ನೆಲ್ಲಿಕಾಯಿ ಪರಿಮಿತ ಮಣ್ಣು ಲಿಂಗಕ್ಕೆ । ಇಲ್ಲಿ ನೋಡಿಕೊ । ಮಂದು ಮಂದು ಯರಡು ಪುಷ್ಪಗುಟ್ಟಿಸಿ । ಎಡದ ಕೈಗೈದು ನಿರ್ದೋಳ ದಿನ್ನು। ಮೆಲ್ಲನೆ ದ್ವಿತಿಹಸ್ತಾಸ್ತು ಮೋರೆ ಅಲ್ಲದಿನ್ನದಿರಿ। ಅಂಗಾಲಿಗೆ ಸಪ್ತ ಊರ್ಧ್ವಕೊನಿಗೆ ಮೂರು ಹಚ್ಚಬೇಕೋ । ಬಲ್ಲಿದ ವಿಠಲನ ಆಜ್ಞೆಯಿದೆ ಯೆಂದು ಇಲ್ಲಿ ಚರಿಸಬೇಕೋ ಸರ್ವಕಾಲಾ ॥ ೧ ॥

## ೧೯೧.

ಹಲ್ಲು ಬೆಳಗುವಲ್ಲಿ ಬಿಂಬ । ಪ್ಲಕ್ಷಪತ್ರೆ ನೆಲ್ಲು ನಿಲ್ಲು । ಮಹಾಲಯಪುಣ್ಯದಿವಸದಿ । ಬಲ್ಲಿದೇಕಾದಶಿ ಪರ್ವಣಾ ಅಮಾವಾಸ್ಯೆ ಇಟ್ಟ ಶಶಿರವಿ ಗ್ರಹಣದಲ್ಲಿ ಅಲ್ಲದೈಯ್ಯ । ದಂತಕಾಷ್ಟಮಲಿನಗಳಿಗೆ ಝಲ್ಲಿಸಿ ನೀರು ಮುಕ್ಕೆಳಿಸಿ ಹನ್ನೆರಡು। ಬಲ್ಲ ಬುಧರಿಗೆ ಪುರಂದರವಿಠಲ ಇಲ್ಲಿ ವಲಿವಾ ಯಿದೆ ಚರಿಸೆ ॥ ೧ ॥

## ೧೯೨.

ಬಾಯಿಮುಕ್ಕಳಿಸಿ ಎಂಟುಭಾರಿಗೊಮ್ಮೆ । ಮೂತ್ರಕ್ಕೆ ಹನ್ನೆರಡು ಭಾರಿ ಬಾಯಿ ಮುಕ್ಕಳಿಸು । ಸ್ತ್ರೀತಲ್ಪಕೆ ಹದಿನಾರು ತೋಯಜನೇತ್ರ ಶ್ರೀವಿಠಲನ ಅಜ್ಞವೂ ॥ ೧ ॥

## ೧೯೩.

ಅಂದವಿಲ್ಲದ ಅಶಕ್ತನಿಗೆ ಒಂದೆ ಅರವಿಯಲ್ಲಿಂದ ಮೈದೊಳದು ಮಡಿಉಟ್ಟು ನಾಮಗಳಿಟ್ಟು । ಚಂದದಲಿ ಸಂಧ್ಯಾವಂದನೆ ಮಾಡಿ ಫಲವಾಹದು ನಿಂದೆ ಹೇಗೆ ತಿಂದು ಮಾರಿದ ಮನುಜಗೆ। ಇಂದ್ರ ಹದಿನಾಲ್ಕು ಮನುನರಕವೆಂದು ಅಂದು ಪುರಂದರವಿಠಲ ಪೇಳಿತೆಂದು ಸಿದ್ಧಾ ॥ ೧ ॥

॥ ಶ್ರೀಮಧ್ವೇಶಾರ್ಪಣಮಸ್ತು ॥.

೧೯೪.

ಎಡಬಲದ ಮುಂದೆ ಇಡಲಾಗದು । ಒಂದೆ ಕಡೆ ಕಣ್ಣುಕಾಣ ದಂತೆ ದಿನ ಪೊಡವಿಯೊಳು ಕರ್ಮವನಾಚರಿಸಿ ಶುಚಿಯಾಗಿ ಸುಖಬಡಲಿ ಬೇಕು । ಸ್ವಾಮಿ ವಿಠಲನ ಆಜ್ಞವನ್ನ ಸ್ತ್ರಾವಾಗದು ॥ ೧ ॥

೧೯೫.

ಏಕವಸ್ತ್ರದಿಂದ ಸ್ನಾನವಮಾಡಲಾಗದು ಏಕವಸ್ತ್ರದಿಂದ ಪ್ರಜಿಸಲಾಗದು । ಏಕವಸ್ತ್ರದಿಂದ ಭುಂಜಿಸಲಾಗದು । ಕೇಳು ಏಕವಸ್ತ್ರದಿಂದ ದಾನ ಹೋಮ ಜಪವಾಗದು ನಿತ್ಯಾ ॥ ೧ ॥

೧೯೬.

ಆಕಳ ಕಿವಿಯಂತೆ ಅಂಗೈಯನೆ ಮಾಡಿ । ಈ ಉದ್ದು ಮುಣುಗುವ ಪರಿಮೇಲಿ ಜಲವ ಸಾಕಾಗದು ಯೆಂದು । ಹೆಚ್ಚು ಕಡಿಮೆ ಕುಡಿಯೆ ಲೋಕದಿ ಸುರೆ ಎಂದೆನಿಸುವದು । ಶ್ರೀಕರಾರ್ಚಿತ ಸೊಬಗು ವಿಠಲರೇಯ ಬೇಕೆಂದು ಇದೇರೀತಿ ಮಾಡಿಹನೂ ॥ ೧ ॥

೧೯೭.

ಮೊಳಕಾಲಿನ ಹೊರಗೆ ಅಂಗೈಪರು ಮೂರುವೇಳೆ ಕುಳಿತಾಗದು ನಿಂತು ಆಗದೈಯ್ಯ । ತಿಳಿಯೊ ಮೂರುವೇಳೆ ಕುಕ್ಕುಟಾಸನದಿಂದ ನಳಿನಾಕ್ಷನು ಪೇಳಿದ ॥ ರಾತ್ರೆ ಉಂಡಾದು ಪದ್ಮಾಸನವೆಂದು । ಬಲನೆ ಸವ್ಯದಿಂದ ಇಳೆಯೊಳು ಈಶಭಕ್ತಿ ಪದ್ಮಾಸನಪೆಂದು । ನಳಿನಾಕ್ಷ ವಿಶಾಲ ಪೇಳಿದನೂ ॥ ೧ ॥

೧೯೮.

ಎಡಗೈಯಿಂದಲೇ ಅಭ್ಯಂಜನಾಚಮನ ಪೊಡವಿಯೊಳಗೆ ದಾನ ಮಾಡಿದ ಮನುಜಗೆ ಯಡವೃತ್ಯು ದಾರಿದ್ರ್ಯವಡನಟ್ಟುವುದೆಂದು ವಡನೆ ಶ್ರುತಿಸ್ಮೃತಿ ಪೇಳುವದೊ । ಬಡವರುದ್ಧಾರಿ ಶ್ರೀಕುಧರದರ ವಿಠಲನ್ನ ಅಡಿಗಳರ್ಚಿಸ ನಾಳೆ ಅಭಾದಂತೆ ॥ ೧ ॥

೧೯೯.

ಕುಲಪತಿಯಾದರು ಸಂಧ್ಯಾವಂದನೆ ಗೈಯದ ಪಾಪಿಯಾದರು ಪರದ್ರೋಹಿಯಾಗೆ ಪಾಪಗೈದು ಪರಪತ್ನಿಯನ್ನೈದಿರೆ ಶ್ರೀಪತಿ ಗೋಪಿಚಂದ ನಲಿಪ್ಪಾಂಗಗೆ ಭೂಪತಿ ಪುರಂದರವಿಠಲಪಾದವ ತೋರ್ಪಾ ॥ ೧ ॥

೨೦೦.

ಕಾಲಕಾಲಕೆ ಸಂಧ್ಯಾವಂದನೆ ಅಲ್ಪವೆಂದು ನಿರಾಕರಿಸೆ । ಶ್ರುತಿ ಸ್ಮೃತಿ ಸಾರುತಿದೆ ಸಕಲ ಪ್ರಯಾಸವು ಮಾಡಲದು ಬಂಜೆಗೆ ಮಕ್ಕಳಾಗುವದೇನೊ ಮೂಢ ಕೇಳೊ ಬಕಧ್ವಂಸಿ ಲಕ್ಷ್ಮೀಕಾಂತವಿಠಲಮೆಚ್ಚಿಸುವನೂ ॥ ೧ ॥

೨೦೧.

ನಕ್ಷತ್ರಕಾಣದ ಪ್ರಾತಃ ಸಂಧ್ಯಾವಂಗನ ಅಧಮಾ । ನಕ್ಷತ್ರಪತಿ ಅನುಜ ಕೃಷ್ಣಚಕ್ರವ ಪಿಡಿದಾ । ನಕ್ಷತ್ರಕಂಡಾದಶೆದಿ ಅಧಮಾ । ಈಕ್ಷಿಸಿ ಮಧ್ಯಾಹ್ನಸಂಧ್ಯಾವಂದನೆ ಗೈಯೆ । ಅಕ್ಷಯಾನಂತ ಶ್ರೀನಾರಾಯಣ ವಿಠಲ ಮೋಕ್ಷಕೊಡುವನು ಈಪರಿ ಚರಿಸಲು ॥ ೧ ॥

೨೦೨.

ಕಂಡಾನಿಶದಲ್ಲಿ ಅರ್ಘ್ಯವನು । ಪ್ರಾತರದಿ ಮಂಡಲಾಕಾರ । ಮಧ್ಯಾಹ್ನದಲ್ಲಿ ಪುಂಡಗಾರನಾಗಿ ಚರಿಸದಲೆ ಇದ್ದರೆ ಅವಗೆ ಪಂಡಿತ ಶ್ರೀಪುರಂದರ ವಿಠಲ ವಲಿಯಾ ॥ ೧ ॥

೨೦೩.

ನಿನ್ನ ದಾಸನಾಗಿ । ನಿನ್ನೆಂಜಲನುಂಡು ನೀನುದಾಸೀನ ಮಾಡಿದರೆ ಲೋಕರು ನಗರೇ । ನಿನ್ನ ಚರಣಕಮಲವನ್ನು ಕೊರಳಲಿ ಕಟ್ಟುವೆ ಪುರಂದರವಿಠಲಾ ॥ ೧ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೨೦೪.

ಅನಾಮಿಕಾಖ್ಯ ಮಧ್ಯದ ಯರಡನೆ ಗೆರೆ ಆದಿ। ಯಿನಿತು ಮಧ್ಯಾಂಗುಲಿ ಕೊನೆ ಗೆರೆ ಕೂಡಿ೪। ಮನಮೂರ್ತಿ ಪರಿಮಾಣ ಅಂಗುಷ್ಠದಿಂದಲಿ। ಯೆಣಿಸು ತರ್ಜನಿಮೂಲಪರ್ಯಂತರ। ಘನ ಹತ್ತು ಗೆರೆ ಜಪ ಪುರಂದರವಿಠಲಗೆ। ಮನದಿ ಅರ್ಚಿಸುತ ಗಾಯತ್ರಿ ಜಪವಾ ॥ ೧ ॥

೨೦೫.

ಉದಯಕಾಲದ ಜಪ ನಾಭಿಗೆ ಸರಿ। ಹೃದಯಕ್ಕೆ ಸರಿಯಾಗಿ ಮಧ್ಯಾಹ್ನದಿ। ವದನಕ್ಕೆ ಸಮಾನ ಸಾಯಂಕಾಲಕ್ಕೆ ನಿತ್ಯ। ಪದುಮನಾಭ ತಂದೆ ಪುರಂದರವಿಠಲಗೆ। ಯಿದೆ ಗಾಯತ್ರಿಯಿಂದ ಜಪಿಸಬೇಕೂ ॥ ೧ ॥

೨೦೬.

ಬಿಡು ಮನುಜ ಯಿಾ ಜಪವು ಸಿದ್ಧಿ ಬಾರದು। ತೊಡೆ ಕೆಳಗೆ ಕೈ ಹಿಂದೆಮುಂದೆ ಕೈ ಚಾಚಿಬಿಡುತ ಮಂತ್ರಾರ್ಥ ನೋಡದಲೆ। ಅಡಿಗಡಿಗೆ ಜಪವ ಮಾಡೆ ದೈತ್ಯರಿಗೆ ಅಹುದಯ್ಯ। ಒಡೆಯ ಪುರಂದರವಿಠಲನೊಲಿಸಬೇಕಾದರೆ। ಪಿಡಿಯೊ ಯಿಾಪರಿ ತಿಳಿದ ವಚನತತ್ವಗಳಾ ॥ ೧ ॥

೨೦೭.

ಒಂದೊಂದು ಬಗೆ ವೃಕ್ಷ ಜಪವ ಐವೈದು ಬೇರೆ। ಒಂದೊಂದು ಹತ್ತು ಜಪ ನೂರು ಅಂಗುಲಿಸಂಖ್ಯೆ ಶಂಖದ ಮಣಿಜಪಕ್ಕೆ। ಒಂದೆ ಸಹಸ್ರಾದಿ ಹವಳಜಪದಿಂದ। ಒಂದೊಂದು ಹತ್ತು ಸಹಸ್ರ ಮುತ್ತಿನ ಜಪದಿಂದಾ। ಒಂದು ಲಕ್ಷ ಸ್ವರ್ಣಮಣಿ ಕೋಟಿ ದರ್ಭೆಗಂಟು। ಒಂದು ಅನಂತ ತುಲಸಿಯ ಜಪವೆಂದು ಪುರಂದರವಿಠಲ ಪೇಳಿದಾ ॥ ೧ ॥

೨೦೮.

ಕೃಷ್ಣಾಜಿನವಾದರೆ ಜ್ಞಾನಸಿದ್ಧಿ ವ್ಯಾಘ್ರಾಜಿನ ಮೋಕ್ಷವೈಯ್ಯ। ನಿಷ್ಟೆಯಿಂದಲೆ ಕಂಬಳಾಸನದಿ ಭೂಃ ಧರಣಿಯಲ್ಲಿ ದುಃಖ ಅಷ್ಟೈಶ್ವರ್ಯವ ಸಿಗುವದು ದೂರ್ವೆ ಕುಷ್ಟರೋಗ ಪಾಷಾಣದಲ್ಲಿ ಯಿಲ್ಲದ ವಿಧಿಯು ಅಚಲಾನಂದವಿಠಲಾ ॥ ೧ ॥

## ೨೦೯.

ಆರು ಅಕ್ಷರದಿಂದ ವ್ಯಾಹೃತಿಯಿಂದ ಓಂಕಾರವಾಗುವದು । ಕೇಳಿ ಈ ಪರಿ ಯಿಪ್ಪತ್ತುನಾಲ್ಕು ಅಕ್ಷರದಿಂದ ತೋರುತಲಿ ಗಾಯತ್ರಿ ರಚಿಸಿದ ಹರಿಯು ಮೆರವದ್ಯೈ ಪುರುಷಸೂಕ್ತದಿ ಅನಂತ ವೇದರಾಶಿ ಧೊರೆಯೆಂದು ಪೊಗಳುವವ್ರೋ ॥ ಓಂಕಾರ ಶ್ರೀಕಾರ ಮೆರವದ್ಯೈವಕ್ತೊಂದು ಲಕ್ಷಗಳು ಈ ಕೃತಿ ಅಶೇಷ ಗುಣಾಧಾರ ಯೆಂದು ನಾರಾಯಣೋದ ಪೂರ್ಣಗುಣನುತ ಭರದಿ ಜ್ಞಾನರೂಪಾಶನೋ ಮೆರವಾದೆಲೆ ಶಾಶಟರ್ದ ವಧರಿಶಿಗೆ ಪುರಂದರವಿಠಲ ಓಂಕಾರ ॥ ೧ ॥

## ೨೧೦.

ವರ ಧ್ರುವನವತಾರ ಶ್ರೀಪಾದರಾಯರೆ । ಸಿರಿ ರಂಗವಿಠಲ ವುಪಾಸಕರು। ತರಳ ಪ್ರಹ್ಲಾದನೆ ಈಶ ಗುರುವ್ಯಾಸರಾಯರೆ ಕೃಷ್ಣನ್ನ ವುಪಾಸಕರು । ಸುರಮುನಿ ಅವತಾರ ನಾರದರೆ ಸಿರಿ ಪುರಂದರದಾಸರೆ ವಿಠಲನ ವುಪಾಸಕರು । ಧರೆಯೊಳು ಇವರಿಗೆ ನರರೆಂದವರಿಗೆ ನರಕತಪ್ಪದು ಕಾಣೊ ಗುರುಮಧ್ವಪತಿವಿಠಲ ॥ ೧ ॥

## ೨೧೧.

ನಿನ್ನ ಜನರ ಸಂಗ ಕೊಡು ಯನ್ನಂತರಂಗ । ಘನ ಗುಣವಂತ ರಂಗ ಮಂಗಳಾಂಗಾ । ಅನ್ಯಾಪೇಕ್ಷೆ ಒಲ್ಲೆ । ಅಂದಿನ ಭವಣೆ ಬಲ್ಲೆ ಮನ್ನಿಸು ಮರಣ ಇಲ್ಲ । ಲೀಲೆಯುನ್ನು ಈ ದೇಹದಲ್ಲಿ ಕಡೆಮಾಡು । ಈ ದೇಹದಲ್ಲಿ। ಮುನ್ನೆ ಪುಟ್ಟಿ ಬರುವದು ಕರ್ಮದಾ ಬಲ್ಲೆ। ಮನ್ಮಸೋ ನಾಥ ಸಿರಿ ವಿಜಯವಿಠಲ ಹರಿ ಧನ್ಯನ್ನ ಮಾಡು ಗತಿಪಥ ತೋರು ॥ ೧ ॥

## ೨೧೨.

ಅಪರಾಧ ಹತ್ತಕ್ಕೆ ಅಭಿಷೇಕ ಉದಕ। ಅಪರಾಧ ನೂರಕ್ಕೆ ಕ್ಷೀರ ಹರಿಗೆ । ಅಪರಾಧ ಸಹಸ್ರಕ್ಕೆ ಹಾಲು ಮೊಸರು ಕಾಣೋ ॥ ಅಪರಾಧ ಲಕ್ಷಕ್ಕೆ ಜೇನು ಘೃತ । ಅಪರಾಧ ಹತ್ತುಲಕ್ಷಕ್ಕೆ ಬಲುಪರಿ ಕ್ಷಿ ೦ಾ ॥

ಅಪರಾಧ ಕ್ಷಮೆಗೆ ಅಚ್ಚ ತೆಂಗಿನ ಹಾಲು । ಅಪರಾಧ ಕೋಟಿಗೆ ಸ್ವಚ್ಛ ಜಲಾ ॥ ಅಪರಾಧ ಅನಂತಕ್ಷಮೆಗೆ ಗಂಧೋದಕ ವುಪಮೆರಹಿತ ನಮ್ಮ ಪುರಂದರವಿಠಲಗೆ ಶಾಂತವಾನವಯ್ಯ ಶಾಂತವಾಕ್ಯ ॥ ೧ ॥

೨೧೩.

ಮಧ್ಯಾಂಗುಲಿ ಮೇಲೆ ಮಣಿಸರವಿಟ್ಟೆನ್ನು । ಬದ್ಧ ಅಂಗುಟಾಗ್ರ ಯೆಣಿಸಬೇಕು । ಕಿರಿ ಅಂಗುಲಿ ಪಂಚ ಭೋಗಿಸಿ ಯಿರಬೇಕು ಭದ್ರವಾಗಿ ನಿಲ್ಲಿಸಿ ನೀರು ಸೋರದೆ ಗಾಯತ್ರಿ ಬುದ್ಧಿಪೂರ್ವಕದಿಂದ ಗೈವುತಲಿರಬೇಕು । ಮುದ್ದುಮೂರುತಿ ನಮ್ಮ ಪುರಂದರವಿಠಲನ ಯುವದೆಂದು ನೋಡುವಾ ಬಗೆ ಕಾಣಲೆ ಬೇಕು ॥ ೧ ॥

೨೧೪.

ನೀನೆ ಕರ್ತನು ಅಕರ್ತ ಸಿರಿ ಅಜಭವಾದಿ ಇಂದ್ರಾದ್ಯಮರರು । ನೀನೆ ಸ್ವಾತಂತ್ರ । ಅಸ್ವತಂತ್ರರವರು । ನೀನೆ ಸರ್ವಾತ್ಮಕನಾಗಿ ಸ್ವೀಕರಿಸುವಾ ॥ ಜ್ಞಾನ ನಿನ್ನಾಧೀನ ಕರ್ಮ ನಿನ್ನಾಧೀನ । ಅನಾದಿ ಕಾಲದಿ ಇರುವ ಜೀವರಿಗೆ ನೀನೆ ಸುಖವನೀವಿ ರುದ್ಧಕರ್ಮಗಳಂತೆ ಅನಾದಿಕಾಲದಿ ಜೀವ ಕರ್ಮ ಜ್ಞಾನ ಅನಾದಿಗಳು ನಿನ್ನಾಧೀನವಯ್ಯ ಅನಾದಿ ಕರ್ಮ ನೀನೆ ಪುರಂದರವಿಠಲ । ನೀನೆ ಸಲಹೋ ನಿನ್ನ ಅಡಿ ಪೊಂದಿದವರಾ ॥ ೧ ॥

೨೧೫.

ಮಾಯವಾದಿ ಪೊಡವಿ ಸುಜನರೆಲ್ಲ ದೃಢವಾಗಿ ತಿಳಿಯುವದು । ಅದ್ವಗಂಧದವನ ಮುಖವ ನೋಡದಿರಿ ನುಡಾದಿರಿ ಗ್ರಾಸ ನಿಮ್ಮ ಗುರುಗಳಾಣೆ । ಮೂಢಾ ಅಹಿತನ ಮತವ ಸುಡಲೀ ಸುಡಲೀ ಹೆಡ್ಡ ತೊತ್ತಿನ ಮೋದ ಮಡದಿಯೊಳು ಪೊಕ್ಕು ಹೆದ್ದೊರೆ ಬಲದಿಂದ । ಪೊಡವಿತಮುಸಿನಾವಾಗ ಒಡೆಯ ಶಿವನೆ ತಾನೆಂದರೆ ಅವನಾ ಮಡದಿ ನಿನಗೇನಾ ಹಳೊ ಮಾದಿಗ ನಾಯಿಯಾ । ಪೊಡವಿಗಧಿಕ ಶಿವ ॥ ವಿಜಯವಿಠಲನ್ನ ಅವನ ಪದಕೆ ನೀವು ಬೀಳಿರೋ ಅದ್ವಬೀಳಿರೋ ॥ ೧ ॥

೨೧೬.

ಆಚಾರ್ಯ ಯೆಂಬೊ ನಾಮ ನೀಚ ಸಂಕರಗ್ಯಾಕೆ। ಕಚ್ಚಿಹರಕ ಖಳ ಮಣಿಮಂತನೆಂಬೊನೂ ॥ ಆಚಾರ್ಯ ಎನ್ನದಿರಿ ಎಂದವರಿಗೆ ಮುಚ್ಚಲಿ ಹೊಡಿಯುವರಯ್ಯ ಸುಜನರಾದವರು। ಯೆಚ್ಚರಿಲ್ಲದ ದುಶ್ಚರಿತನಂತೆ ಈ ಧರೆಯೊಲ್ಲವು। ಹೆಚ್ಚು ದೈವವೆಂದು । ವಾದಿಸಿ ಪೇಳುವ ಒಂದನು ಅರಿಯದೆ। ನಾಚಿಕಿಲ್ಲದೆ ನಾಯಿ ಬೊಗಳಿದಂತೆ ಶೀತಾಂಶುವದನ ನಮ್ಮ ವಿಜಯವಿಠಲನ್ನ ಮತಕ್ಕೆ। ಮೆಚ್ಚಿ ಅಹಿತದ ಮತಕೆ ಕಿಚ್ಚು ಬಡಿರಯ್ಯ ॥ ೧ ॥

೨೧೭.

ಮಾಯಾವಾದಿ ವಾದಿಗಳಿಗೆ ನಾಯಿ ಜನ್ಮವೆ ಸತ್ಯ। ಹರಿಭಕ್ತರಿಲ್ಲಿಲ್ಲಿ ಪೂಜ್ಯರೂ ಸತ್ಯ। ಸಂಕರನೆಂಬುವನು ಮಂಕು ತೊತ್ತಿನ ಮಗ। ಹಿಂದಿನ ವೈರದಿ ಹೀನ ಮತವ ಮಾಡಿ ಅಂದು ಅವನ ಹಿಡಿದು ಬಂಜಿಸಿದ ಕಲಿಭೀಮಾ। ಯೆಂದು ಅವನ ಮತವ ಮುರಡಿಯು ಮಾಡಿ ವಿಜಯವಿಠಲನೆ ಪರದೈವವೆಂದು ಮೆರದ ಈ ಧರೆಯೊಳಗೇ ॥

೨೧೮.

ಮುಟ್ಟು ಯುವತಿಗು ಶಬ್ದ ಕೇಳಿದಡೆ ಪಾಪ। ಎಂಟಿರಡು ಮೂರಾಚಮನಕೆ ಪರಿಹರವೋ। ದೃಷ್ಟಿಸಿ ನೋಡಿದರೆ ಥಟ್ಟನೆ ಜಲದಲ್ಲಿ ಐನೂರು ಸ್ನಾನದಿ ಶುದ್ಧ। ಮುಟ್ಟಿದಡೆ ಕುಳಿತ ಸ್ಥಳ ಮೂರು ದಿನ ವರ್ಜಿಸಲು ಬೇಕು। ವುಚ್ಚಿಷ್ಟ ಸೋಂಕಲು ಐದು ನಿರಾಹಾರವಣ್ಣಾ॥ ಇಷ್ಟು ಮಾಡಿದಡೆ ಪಾಪ ಪರಿಹರವಯ್ಯಾ। ಶಿಷ್ಟರಲ್ಲದೆ ಮತ್ತು ಯೆಲ್ಲವರಿಗೆ ಅಸಾಧ್ಯವಿದು। ಘಟ್ಯಾಗಿ ಜಗನ್ನಾಥ ಎಂದರೆ। ಮುಟ್ಟಲಂಜುವದಘವು ಓಡಿಪೋಗುವದಯ್ಯ। ಇಷ್ಟೆಲ್ಲ ಒಂದೆಮಾತ್ರದಿ ಪದ್ಮಪುರಾಣವ ವಿಚಾರಿಸು ಮನುಜಾ ಅಲ್ಲಿ। ಸ್ಪಷ್ಟವಾಗಿ ಪೇಳುವದು ವಚನ। ಜಗನ್ನಾಥನ ನಂಬುವರಿ ಯೆಲ್ಲ ಕೇಳಿರಯ್ಯ। ಗುರು ಪುರಂದರವಿಠಲನ ಪದವಿಯ ಬೇಡುವರೂ ॥ ೧ ॥

೨೧೯.

ಇದೆ ಮುನಿಗಳ ಮನದ ಕೊನೆ ಠಾವು । ಇದೆ ಬ್ರಹ್ಮಾದಿಗಳ ಹೃತ್ಕಮಲದ ಠಾವು । ಇದೆ ಅರಿವ ಸುಜ್ಞಾನಿಗಳಿಗೆ ವೈಕುಂಠವು । ಇದೆ ದ್ವಾರಕವು ಇದೆ ಕ್ಷೀರಾಂಬುಧಿ । ಇದೆ ಪುರಂದರವಿಠಲನ ಮಂದಿರಾ ॥

೨೨೦.

ಶಕ್ತಿ ಆಯುಧದಿಂದ ಸಲಹಿದೆನೆಂಬೊ ಘನತೆ । ವ್ಯಕ್ತಿ ಮಾಡಿಕೊಂಡು ಭುವನದಲ್ಲಿ । ಭಕ್ತವತ್ಸಲನೆಂಬೊ ಬಿರಿದು ಮಾತ್ರಕೆ ಪಡದಿ । ಭಕ್ತನಲ್ಲಿ ನಿನಗೆ ವಾತ್ಸಲ್ಯವಿತ್ತೆಮಗೆ ವಿ । ಭಕ್ತವಾಯಿತ್ಯಾಕೆ ಇದನೆ ನೋಡು । ಆಯುತವಾದ ಘೋರ ಸಂಸಾರದಲ್ಲಿ ತಂದು । ನಕ್ತಂಚರರಿಗೆ ಸಹಾಯನಾಗಿ । ಹೊತ್ತು ಹೊತ್ತಿಗೆ ಪ್ರವಾಹರೂಪ ದುಃಖ । ಯುಕ್ತನ ಮಾಡಿ ಬಲು ದಣಿಸಿದುದಕೆ ಪೂ । ರ್ವೋಕ್ತವಾದರೆ ಸಹಜವಾಗಿರೆ ಶ್ರೀಕೃಷ್ಣ । ಸಕ್ತವಾಯಿತ್ಯಾಕೆ ಇನಿತು ಕಠಿಣಾತುರಾ । ಶುಕ್ತಿಯಲ್ಲಿ । ರಜತಭ್ರಾಂತಿಯ ತೋರಿದಂತೆ । ಶಕ್ತ ನಿನ್ನ ಕರುಣ ಇನಿತಾಯಿತು । ನಿತ್ಯ ಮಂಗಳಮೂರ್ತಿ ನಿನಗೆ ನಿನ್ನ ಕ್ರಿಯೆಗೆ ಅ । ಸತ್ಯ ಯೆಂದಿಗು ಸಲ್ಲ ಶ್ರುತಿ ಸಮ್ಮತಾ । ಭೋಕ್ತಸಾರನೆ ಗುರು ವಿಜಯವಿಠಲ ನಿನ್ನ । ಉಕ್ತಿಗೆ ವ್ಯಾಹತಿ ಬಾರದಂತೆ ನೋಡೋ ॥ ೧ ॥

೨೨೧.

ಭಕ್ತವಸ್ಸಲನೆಂಬೊ ಬಿರುದುಳ್ಳ ದೇವ ನಿನ್ನ । ಭಕ್ತಿಯಿಂದಲಿ ನಮಿಸಿ ಬಿನ್ನೈಸುವೆ । ಶಕ್ತನ ಬಿನ್ನಪವ ಮನಕೆ ತಂದು ವೇಗಾ । ಹಾಸಕುತಿಯಿಂದಲಿ ಗ್ರಹಿಸಿ ಸಫಲ ಮಾಡೂ । ಭಕತನಾದ ಇವಗೆ ಲೌಕಿಕದಿಂದ ಬಂದ ವಿಕಟರೂಪವಾದ ದುರಿತದಿಂದ । ಮುಕ್ತನ ಮಾಡುವದು ಕರುಣದಿಂದಲಿ ವೇಗಾ । ಶಕಟಭಂಜನ ಕೃಷ್ಣ ವುತ್ಕೃಷ್ಟನೆ ಮುಕುತಿದಾಯಕ ಗುರು ವಿಜಯವಿಠಲ ಮದ್ಭಕ್ತನ ಪ್ರಾಣಸಂತಿಯೆಂಬೊದು ಸತ್ಯಮಾಡೂ ॥ ೧ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

## ೨೨೨.

ಭಕತರ ಮನೋರಥ ಪೂರ್ಣಮಾಡುವಲ್ಲಿ ವೃತ್ಯಪ್ಪವಾದ ಕಾಮಧೇನುವೆ ನೀನೆ। ಭಕತರ ಅಪರಾಧ ಸಹನಮಾಡುವಲ್ಲಿ ಧರಿತ್ರಿಗೆ ಸಮನೆನಿಪೆ ಸಾರ್ವಭೌಮಾ। ಭಕತರ ಮೇಲೆ ಮಹಾಕರುಣಾ ಪಿತೃ ಮಾತೃ ಭ್ರಾತೃ ಮತ್ತೆ ಗುರು ಸಮನೆನಿಪೆ। ಭಕತರ ಅಭಿಮಾನ ಸಹನ ಮಾಡುವಲ್ಲಿ ಮಿತ್ರನೆನಿಸಿಕೊಂಬೆ ಅನುಮತಬಂಧು। ಭಕತರ ದುರಿತ ಕಳದು ಕಾವ ವಿಷಯದಲ್ಲಿ ಪುತ್ರನೆನಿಪೆ ಸತತ ಸನ್ಮಂಗಳಾಂಗ। ಭಕತರ ನಿಂದಕರ ನಿಗ್ರಹ ಮಾಡುವಲ್ಲಿ ವೃತ್ಯು ಯಮ ಸದೃಶನೆನಿಪೆ ದೇವಾ। ಭೃತ್ಯವತ್ಸಲ ಗುರು ವಿಜಯವಿಠಲರೇಯ ಭಕತರ ಪೊರೆವ ಬಿರಿದು ನಿನ್ನದಯ್ಯಾ ॥ ೧ ॥

## ೨೨೩.

ಶತ್ರುಮಿತ್ರರುಗಳಲ್ಲಿ ಸಮಸ್ಥಿತನಾಗಿ ನೀನೆ। ಪ್ರಾಕೃತಿಯು ಜೀವ ಕಾಲ ಅನುಸರಿಸಿ। ಕೃತ್ಯವ ಮಾಪ್ಪನಾಗಿ ಜೀವರ್ಗೆ ಸುಖದುಃಖಮುಕ್ತಿಗಳುಣಿಸುವಿ। ನಿಯಮದಂತೆ ಕರ್ತನೆಂದು ನಿನ್ನ ನೆರೆನಂಬಿ ಇಪ್ಪವಂಗೆ ದುಷ್ಕೃತ್ಯಗಳಿಲ್ಲವೆಂದು ಶಾಸ್ತ್ರಸಿದ್ಧ। ಚಿತ್ತಕ್ಕೆ ತಂದು ವೇಗಾ ಶತ್ರು ಸಾಹಸವನ್ನು ವ್ಯರ್ಥಮಾಡಿ ಭಕ್ತನಾದವನ್ನ ಹತ್ತಿಲಿ ಕರದು। ದಯದೃಷ್ಟಿಯಿಂದಲಿ ನೋಡಿ ವುತ್ತಮವಾದ ಸುಖವೈದುವದು। ಭಕತವತ್ಸಲ ಗುರು ವಿಜಯವಿಠಲರೇಯ। ಯೆತ್ತಲಿದ್ದರು ನಿನ್ನ ಪೊಂದಿದವನೆ ॥ ೧ ॥

## ೨೨೪.

ಇನ್ನೆಷ್ಟು ಕಾಲಕ್ಕೂ ಮರಿಯದಂತೆ ಮಾಡಿಸಿ। ಅನಂತಮಹಿಮ ನಿನ್ನ ಇಚ್ಛೆಗೆ ಯೆದುರಾರು ಇನ್ನಾದರು ನೀ ಕೃಪೆಯಿಂದ ನೋಡಿದರೆ ಘನ್ನವಾದ ಸುಖದಿಂದ ಕಡೆಗೆ ಐದುವನಂತೊ। ಚಿನ್ಮಯಮೂರುತಿ ಗುರುವಿಜಯವಿಠಲರೇಯ। ಎನ್ನಪರಾಧವನ್ನು ನಿನಗರ್ಪಿತವೋ ॥ ೧ ॥

೨೨೪.

ಅತ್ಯಣು ಜೀವಧರಗೆ ಹತ್ತೈದು ಮೇಲೊಂದು ಕಳವುಳ್ಳ ಲಿಂಗವು । ಸುತ್ತ ಅವ್ಯಕ್ತದೇಹವೆಂಬ ಕವಚ ತೊಡಿಸಿ । ಕೃತ್ತಿವಾಸನ ಪಿತನಿದಕಭಿಮಾನಿಮಾಡಿ । ಮತ್ತನಿರುದ್ಧ ಮೊದಲಾದ ಸೂಕ್ಷ್ಮಾವರ್ತದಲ್ಲಿ ವಿಸ್ತಾರವಾಗಿ ದೇವತೆಗಳನ್ನು ಇಟ್ಟು ಸತ್ತ್ರಿಯು ಮೊದಲುಮಾಡಿ ಸರ್ವಾಂಗ ವ್ಯಾಪಿಸಿಕೊಂಡು । ಯೆತ್ತ ಪೋಗಗೊಡದೆ ಬಳಲಿಸೋದುಚಿತವೆ । ನಿತ್ಯಮಂಗಳಮೂರ್ತಿ ಮುದ್ದು ಮೋಹನವಿಠಲ ನಿನ್ನ ಭೃತ್ಯಾನುಭೃತ್ಯರಲ್ಲಿಟ್ಟು ಪೊರೆಯೊ ಎನ್ನ ॥ ೧ ॥

೨೨೫.

ಉಡುಪಿನ ಕೃಷ್ಣನೆ ಸಡಗರ ನಿನಗೇಕೆ । ಒಡವನಾದವನ ಭವ ಮಡುವಿನೊಳನೂಕಿ ಮಿಡಿಕಿಸಿ ನೋಡುವದು ಧರವೇನೊ ಹರಿಯೆ । ಒಡಲಗೋಸುಗ ನಿನ್ನ ಬೇಡಬಂದವನಲ್ಲ । ದೃಢಭಕುತಿಜ್ಞಾನ ಕೊಟ್ಟು ರಕ್ಷಿಸು ಪೊರೆಯೊ । ಕಡಲಶಯನ ನಮ್ಮ ಮುದ್ದು ಮೋಹನ ವಿಠಲ ಅಘ । ದಡವಿಯ ದಾಟಿಸಿ ಕಡೆಗಾಣಿಸು ಸುಲಭದಿಂದಾ ॥ ೧ ॥

೨೨೬.

ಭಾರತಿಪತಿ ಯೆನ್ನ ಭಾರವ ಪರಿಹರಿಸಿ । ಸಾರಿಸಾರಿಗೆ ಹರಿಪಾದ ಸ್ಮರಣೆಯನ್ನು ಆರಾಧನೆಗೆ ಪಾತ್ರ ದಾರಿ ತೋರಿಸಿ ನೀನೆ ಸಂ । ಸಾರಾಂಬುಧಿಯೆಂಬೊ ವಾರಿಧಿ ದಾಟಿಸಿ । ಪ್ರೇರೈಸು ಮನೋಭೀಷ್ಟ ಪೂರ್ಣ ಪ್ರಜ್ಞನೆ । ಈರೇಳು ಲೋಕದಲಿ ಸರ್ವಜೀವರೊಳು ನಿಂತು । ಮೂರೇಳು ಸಾವಿರದಾರನೂರು ಜಪ । ಬೇರೆ ಬೇರೆ ಮಾಡುವ ಶ್ರೀಹಂ ಅಜ್ಞಾದಿ । ಆರುಮೂರು ಭಕುತಿ ವಾರವಾರಕೆ ಕೊಟ್ಟು । ಆರು ವರ್ಗವ ಬಿಡಿಸೊ ಅಸುರಮರ್ದನನೇ । ಕಾರಣಕರ್ತ ಮುದ್ದು ಮೋಹನವಿಠಲನ ಹೃದ್ಧಾಮದೊಳು । ತೋರೊ ಧೀರ ಮಧ್ವಮುನಿಯೇ ॥ ೧ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

೨೨೭.

ನಾಲ್ಕು ಮನೆಯು ಬಿಡಿಸೊ ನಾಗಶಯನಾ । ನಾಲ್ಕೆರಡು ಪೊಂದಿಸೊ ನಾಲ್ಕು ಐದು ಭಕುತಿ । ನಾಲ್ಕು ರ್ಝಾಪದೊಳಿತ್ತು ನಾಕಜನಕ ತೋರೊ ಮುದ್ದು ಮೋಹನವಿಠಲಾ ॥ ೧ ॥

೨೨೮.

ನಿನ್ನ ಭಕ್ತನೆಂದೆನಿಸಿದ ಜನರು ಭಂಗ ಪಡಲುಬೇಕು । ದಿನ ಪ್ರತಿದೀನ ಅನ್ನಉದಕವಸ್ತ್ರಗಳು ಕಾಣದೆ ಇರಬೇಕು । ಬೆನ್ನತ್ತಿ ರೋಗಗಳು ಹತ್ತಿ ಇರಲು ಬೇಕು । ತನ್ನವರ ಕೈಯಿಂದ ಛೀ ಯೆನಿಸಿಕೊಳಬೇಕು । ಪನ್ನಗಶಯನ ಶ್ರೀಪುರಂದರವಿಠಲಾ ॥ ೧ ॥

೨೨೯.

ಹೇಗೆ ಬರದೀತು ಪ್ರಾಚೀನದಲ್ಲಿ । ಹಾಗೆ ಇರಬೇಕು ಸಂಸಾರದಲ್ಲಿ । ಪಕ್ಷಿ ಕೂತಿತು ಅಂಗಳದಲ್ಲಿ । ಹಾರಿಹೋಯಿತು ಆಕ್ಷಣದಲ್ಲಿ । ಆಡುವ ಮಕ್ಕಳು ಮನೆಕಟ್ಟಿದರು । ಆಟ ಸಾಕೆಂದು ಮುರಿದೋಡಿದರು । ಸಂತೆ ನೆರದೀತು ನಾನಾ ಪರಿ । ತಿರಿಗಿ ಆಯಿತು ತಮ್ಮ ತಮ್ಮ ದಾರಿ । ಪಸ್ತಿಕಾರನು ವಸ್ತಿಗೆ ಬಂದ । ಹೊತ್ತಾರೆ ಯೆದ್ದು ಊರಿಗೆ ಹೋದ । ಈ ಸಂಸಾರಮಾಯ ಬಿಡಿಸಿ । ಕಾಯೊ ಪುರಂದರವಿಠಲಾ ॥ ೧ ॥

## ಉಗಾಭೋಗಗಳ ೨ನೇ ಭಾಗವು

## ಸಂಪೂರ್ಣವು.

॥ ಶ್ರೀಕೃಷ್ಣಾರ್ಪಣಮಸ್ತು ॥

ಈ ಪುಸ್ತಕವು

ಪಾವಂಜೆ ಗುರುರಾವ್,

ಇವರ

ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ

ಮುದ್ರಿಸಲ್ಪಟ್ಟು,

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಿಂದ

**ಪ್ರಕಟಿಸಲ್ಪಟ್ಟಿತು.**

ಶಾ. ಶಕ ೧೮೪೫.

1923.